# All India Radio: Bangalore
# National Bulletins In Kannada
# 08.08.2025 / 7.35 am

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

<><*<><>*><>

ಮುಖ್ಯಾಂಶಗಳು

ಮುಖ್ಯಾಂಶಗಳು :

೧. ಪ್ರಧಾನಿ ನರೇಂದ್ರ ಮೋದಿ ಬ್ರೆಸಿಲ್ ಅಧ್ಯಕ್ಷರ ನಡುವೆ ದೂರವಾಣಿ ಸಂಭಾಷಣೆ; ವ್ಯಾಪಾರ, ತಂತ್ರಜ್ಞಾನ, ರಕ್ಷಣಾ ಕ್ಷೇತ್ರದಲ್ಲಿ ಸಹಕಾರ ವೃದ್ಧಿಗೆ ಒಮ್ಮತ

೨. ರಷ್ಯಾ ಅಧ್ಯಕ್ಷ ಪುಟಿನ್ ಅವರನ್ನು ಭೇಟಿಯಾದ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್

೩. ಬಿಹಾರದ ಪುನೌರಾ ಧಾಮದಲ್ಲಿಂದು ಸೀತಾ ದೇವಿ ದೇವಾಲಯದ ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡಲಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ

೪. ೧೯ ವರ್ಷದೊಳಗಿನವರ ಏಷಿಯನ್ ಬಾಕ್ಸಿಂಗ್ ಚಾಂಪಿಯನ್‌ಷಿಪ್ - ಭಾರತಕ್ಕೆ ೧೨ ಪದಕ ಖಚಿತ

><><><><><><><><><

ಪ್ರಧಾನಿ ನರೇಂದ್ರ ಮೋದಿ ಅವರಿಗೆ ನಿನ್ನೆ ಬ್ರೆಜಿಲ್ ಅಧ್ಯಕ್ಷ ಲೂಯಿಸ್ ಇನ್ಯಾಸಿಯೋ ಲೂಲಾ ಡಾ ಸಿಲ್ವಾ ಅವರು ದೂರವಾಣಿ ಕರೆ ಮಾಡಿದರು. ಈ ವೇಳೆ ಭಾರತ ಮತ್ತು ಬ್ರೆಜಿಲ್ ನಡುವಿನ ವ್ಯಾಪಾರ, ತಂತ್ರಜ್ಞಾನ, ಇಂಧನ, ರಕ್ಷಣಾ, ಕೃಷಿ, ಆರೋಗ್ಯ ಮತ್ತು ಜನರಿಂದ ಜನರ ಬಾಂಧವ್ಯಗಳ ಕ್ಷೇತ್ರಗಳಲ್ಲಿ ಸಹಕಾರವನ್ನು ಮತ್ತಷ್ಟು ವೃದ್ಧಿಸಲು ಉಭಯ ನಾಯಕರೂ ಒಪ್ಪಿಗೆ ವ್ಯಕ್ತಪಡಿಸಿದರೆಂದು ತಿಳಿಸಲಾಗಿದೆ. ಪ್ರಧಾನಿ ಮೋದಿ ಅವರು ಕಳೆದ ತಿಂಗಳು ಬ್ರೆಜಿಲ್‌ಗೆ ನೀಡಿದ ಭೇಟಿಯನ್ನು ಈ ಸಂದರ್ಭ ಅವರು ನೆನಪಿಸಿಕೊಂಡರು. ಎರಡೂ ದೇಶಗಳ ಮೇಲೆ ಪರಿಣಾಮ ಬೀರುವ ಪ್ರಾದೇಶಿಕ ಮತ್ತು ಜಾಗತಿಕ ವಿಷಯಗಳ ಬಗ್ಗೆ ಕೂಡಾ ನಾಯಕರು ಪರಸ್ಪರ ಚರ್ಚೆ ನಡೆಸಿದರು. ಇದೇ ವೇಳೆ, ಭಾರತ-ಬ್ರೆಜಿಲ್ ಕಾರ್ಯತಂತ್ರದ ಪಾಲುದಾರಿಕೆಯನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುವ ಬದ್ಧತೆಯನ್ನು ಎರಡೂ ನಾಯಕರೂ ಪುನರ್ ದೃಢಪಡಿಸಿದ್ದಾರೆ ಎಂದು ಪ್ರಧಾನಿ ಕಚೇರಿ ತಿಳಿಸಿದೆ.

><><><><><><><><><

ರೈತರ ಕಲ್ಯಾಣವೇ ಕೇಂದ್ರ ಸರ್ಕಾರದ ಪ್ರಮುಖ ಆದ್ಯತೆಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಎಂ.ಎಸ್. ಸ್ವಾಮಿನಾಥನ್ ಶತಮಾನೋತ್ಸವ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ

ಮಾತನಾಡಿದ ಅವರು, ಭಾರತ, ರೈತರು, ಮೀನುಗಾರರು ಮತ್ತು ಹಾಲು ಉತ್ಪಾದಕರ ಹಿತಾಸಕ್ತಿಗೆ ವಿರುದ್ಧವಾಗಿ ಯಾವುದೇ ಪರಿಸ್ಥಿತಿಯಲ್ಲಿ ರಾಜಿಯಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಡಾ. ಸ್ವಾಮಿನಾಥನ್ ಅವರು ಭಾರತವನ್ನು ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗಿಸಲು ಹೋರಾಡಿದ್ದರು ಎಂದು ಪ್ರಧಾನಿ ಸ್ಮರಿಸಿದರು. ಇಂದು ಭಾರತ ಜಗತ್ತಿನಲ್ಲಿ ಹಾಲು, ಬೇಳೆ-ಕಾಳು ಹಾಗೂ ಸೆಣಬಿನ ಅಗ್ರ ಉತ್ಪಾದಕ ರಾಷ್ಟ್ರವಾಗಿದೆ ಎಂದು ಅವರು ತಿಳಿಸಿದರು.

ಧ್ವನಿ : ಪ್ರಧಾನಿ ನರೇಂದ್ರ ಮೋದಿ, ( ೩೦ ಸೆಂಕೆಂಡುಗಳು)

><><><><><><><><

ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ನಿನ್ನೆ ರಷ್ಯಾದ ರಾಜಧಾನಿ ಮಾಸ್ಕೋದಲ್ಲಿರುವ ಕ್ರೆಮ್ಲಿನ್‌ನಲ್ಲಿ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು. ಇದಕ್ಕೂ ಮುನ್ನ ಅವರು ರಷ್ಯಾ ಭದ್ರತಾ ಮಂಡಳಿಯ ಕಾರ್ಯದರ್ಶಿ ಸೆರ್ಜಿ ಶೋಯಿಗು ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಭಾರತ ಹಾಗೂ ರಷ್ಯಾ ನಡುವಿನ ಸಂಬಂಧ ವಿಶೇಷ ಹಾಗೂ ದೀರ್ಘಕಾಲಿಕವಾಗಿದ್ದು, ಭಾರತ ಈ ಸಂಬಂಧವನ್ನು ಬಹಳಷ್ಟು ಮೌಲ್ಯಪೂರ್ಣವಾಗಿ ಪರಿಗಣಿಸುತ್ತದೆ. ಉಭಯ ರಾಷ್ಟ್ರಗಳ ನಡುವೆ ಉನ್ನತ ಮಟ್ಟದ ಪಾಲುದಾರಿಕೆಗಳಲ್ಲಿ ತೊಡಗಿಸಿಕೊಂಡಿದ್ದು, ಈ ಪಾಲುದಾರಿಕೆಗಳು ಸಾಕಷ್ಟು ಲಾಭದಾಯಕ ಕೊಡುಗೆಗಳನ್ನು ನೀಡಿವೆ ಎಂದರು. ಇದೇ ವೇಳೆ, ರಷ್ಯಾ ಅಧ್ಯಕ್ಷ ಪುಟಿನ್ ಅವರು ಶೀಘ್ರದಲ್ಲೇ ಭಾರತಕ್ಕೆ ಭೇಟಿ ನೀಡಲಿದ್ದಾರೆ ಎಂದು ಅವರು ತಿಳಿಸಿದರು.

ಧ್ವನಿ : ಅಜಿತ್ ದೋವಲ್, ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ ( ೨೩ ಸೆಕೆಂಡುಗಳು)

><><><><><><><><

ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಇಂದು ಬಿಹಾರದ ಸೀತಾಮರ್ಹಿ ಜಿಲ್ಲೆಯ ಪುನೌರಾ ಧಾಮದಲ್ಲಿ ಸೀತಾ ದೇವಿಗೆ ಸಮರ್ಪಿತ ಭವ್ಯ ದೇವಾಲಯದ ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡಲಿದ್ದಾರೆ. ಇಂದು ಮಧ್ಯಾಹ್ನ ವೇದಘೋಷಗಳ ನಡುವೆ ಭೂಮಿಪೂಜೆ ಮತ್ತು ಶಿಲಾನ್ಯಾಸ ಕಾರ್ಯಕ್ರಮ ನಡೆಯಲಿದೆ. ಈ ಸಂದರ್ಭದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಲಿದ್ದಾರೆ. ಶಿಲಾನ್ಯಾಸ ಸಮಾರಂಭ ಕಾಶಿ ಮತ್ತು ಮಿಥಿಲಾ ಪ್ರದೇಶದ ಪಂಡಿತರ ಮತ್ತು ಪುರೋಹಿತರ ಮೇಲ್ವಿಚಾರಣೆಯಲ್ಲಿ ನಡೆಯಲಿದೆ. ಈ ದೇವಾಲಯ ಹಾಗೂ ಸುತ್ತಮುತ್ತಲಿನ ಸಂಕೀರ್ಣ ನಿರ್ಮಾಣಕ್ಕೆ ಅಂದಾಜು ೮೮೩ ಕೋಟಿ ರೂಪಾಯಿ ವೆಚ್ಚವಾಗಲಿದೆ. ಅಯೋಧ್ಯೆಯ ಶ್ರೀರಾಮ ಮಂದಿರ ಮಾದರಿಯಲ್ಲಿ ನಿರ್ಮಾಣವಾಗಲಿರುವ ಈ ನೂತನ ಸೀತಾ ಮಂದಿರಕ್ಕಾಗಿ ಬಿಹಾರ ಸರ್ಕಾರ ೫೦ ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ನಿರ್ಧರಿಸಿದೆ. ಮಂದಿರದ ನಿರ್ವಹಣೆಗಾಗಿ 'ಶ್ರೀ ಜಾನಕಿ ಜನ್ಮಭೂಮಿ ಪುನೌರಾ ಧಾಮ ಮಂದಿರ ನ್ಯಾಸ ಸಮಿತಿ' ಎಂಬ ಟ್ರಸ್ಟ್ ರಚಿಸಲಾಗಿದೆ. ಇದು ಅಯೋಧ್ಯೆಯ ರಾಮಮಂದಿರ

ಟ್ರಸ್ಟ್‌ನ ಮಾದರಿಯಾಗಿದೆ. ಇದೇ ಸಂದರ್ಭದಲ್ಲಿ, ಸೀತಾಮರ್ಹಿಯಿಂದ ನವದೆಹಲಿಗೆ ನೇರ ರೈಲು ಸಂಪರ್ಕ ನೀಡಲಿರುವ ಅಮೃತ ಭಾರತ ಎಕ್ಸ್‌ಪ್ರೆಸ್ ರೈಲಿಗೆ ಸಚಿವ ಅಮಿತ್ ಶಾ  ವೀಡಿಯೋ ಕಾನ್ಫರೆನ್ಸ್ ಮೂಲಕ ಹಸಿರು ನಿಶಾನೆ ತೋರಲಿದ್ದಾರೆ. ಈ ರೈಲು ಬಿಹಾರದ ಹಲವಾರು ಪ್ರಮುಖ ಸ್ಥಳಗಳನ್ನು ಸಂಪರ್ಕಿಸುವ ಮೂಲಕ ನವದೆಹಲಿಗೆ ನೇರ ಸಂಪರ್ಕ ಕಲ್ಪಿಸಲಿದೆ. ಪುನೌರಾ ಧಾಮ ದೇವಾಲಯವನ್ನು ಪುಷ್ಪಗಳಿಂದ ಅಲಂಕರಿಸಲಾಗಿದೆ. ಭೂಮಿ ಪೂಜೆಯ ಪ್ರಯುಕ್ತ ೨೧ ತೀರ್ಥಕ್ಷೇತ್ರಗಳಿಂದ ಮಣ್ಣು ಹಾಗೂ ೩೧ ಪವಿತ್ರನದಿಗಳ ನೀರನ್ನು ತಂದು ಭಕ್ತಿಪೂರ್ವಕ ಸಮರ್ಪಣೆ ಮಾಡಲಾಗುತ್ತಿದೆ. ಪಾಟ್ನಾದ ಮಹಾವೀರ ಮಂದಿರದಲ್ಲಿ ತಯಾರಿಸಲಾದ ಲಡ್ಡೂಗಳನ್ನು ಈ ಸಂದರ್ಭದಲ್ಲಿ ಭಕ್ತರಿಗೆ ವಿತರಿಸಲಾಗುತ್ತದೆ.

><><><><><><><><><

ಭಾರತವು ಜನವರಿಯಿಂದ ಏಪ್ರಿಲ್ ೨೦೨೫ರವರೆಗೆ ವೈದ್ಯಕೀಯ ಉದ್ದೇಶಗಳಿಗಾಗಿ ೧೩೧ ಲಕ್ಷಕ್ಕೂ ಹೆಚ್ಚು ವಿದೇಶಿ ಪ್ರವಾಸಿಗರ ಆಗಮನವನ್ನು ದಾಖಲಿಸಿದೆ. ಈ ಅವಧಿಯಲ್ಲಿ ಈ ಪ್ರವಾಸಿಗರ ಪ್ರಮಾಣ ಒಟ್ಟು ಸುಮಾರು ಶೇಕಡಾ ೪.೧ ರಷ್ಟಿದೆ ಎಂದು ಕೇಂದ್ರ ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ರಾಜ್ಯ ಸಭೆಯಲ್ಲಿ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.  ಕಳೆದ ೫ ವರ್ಷಗಳಲ್ಲಿ ಬಾಂಗ್ಲಾದೇಶವು ವೈದ್ಯಕೀಯ ಪ್ರವಾಸಿಗರಿಗೆ ಪ್ರಮುಖ ಮೂಲ ದೇಶವಾಗಿ ಹೊರ ಹೊಮ್ಮಿದೆ. ೨೦೨೪ರಲ್ಲಿ ೪.೮೨ ಲಕ್ಷ ವಿದೇಶಿ ಪ್ರವಾಸಿಗರ ಆಗಮನವನ್ನು ಕಂಡಿರುವ ಇರಾಕ್, ಸೊಮಾಲಿಯಾ, ಓಮನ್ ಮತ್ತು ಉಜ್ಬೇಕಿಸ್ತಾನಗಳು ನಂತರದ ಸ್ಥಾನಗಳಲ್ಲಿವೆ. ೨೦೨೪ರಲ್ಲಿ ವೈದ್ಯಕೀಯ ಉದ್ದೇಶಗಳಿಗಾಗಿ ಆಗಮಿಸಿದ ಪ್ರವಾಸಿಗರ ಸಂಖ್ಯೆ ಒಟ್ಟು ೬ ಲಕ್ಷ ೪೪ ಸಾವಿರ ೯೮೭ ರಷ್ಟಿದ್ದು ೨೦೨೦ರಲ್ಲಿ ದಾಖಲಾಗಿದ್ದ ೧.೮೨ ಲಕ್ಷಕ್ಕಿಂತ ಏರಿಕೆಯಾಗಿದೆ. ವೈದ್ಯಕೀಯ ಪ್ರವಾಸೋದ್ಯಮದ ಅಭಿವೃದ್ಧಿ ಮತ್ತು ಪ್ರಚಾರವನ್ನು ಪ್ರಾಥಮಿಕವಾಗಿ ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರವೇಶಗಳು ಆಡಳಿತಗಳು ನಿರ್ವಹಿಸುತ್ತವೆ ಮತ್ತು ಕೇಂದ್ರ ಸರ್ಕಾರವು ವಿವಿಧ ಯೋಜನೆಗಳು ಮತ್ತು ಉಪಕ್ರಮಗಳು ಈ ಪ್ರಯತ್ನಗಳಿಗೆ ಪೂರಕವಾಗಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ  ಹೀಲ್ ಇನ್ ಇಂಡಿಯಾ ಅಭಿಯಾನವನ್ನು ಸಕ್ರೀಯವಾಗಿ ಪ್ರಚಾರ ಮಾಡುತ್ತಿದೆ. ಆಸ್ಪತ್ರೆಗಳು, ಹೋಟೆಲ್ ಗಳು, ವಿಮಾನ ಸಂಸ್ಥೆಗಳು ಮತ್ತು ನಿಯಂತ್ರಕ ಸಂಸ್ಥೆಗಳು ಸೇರಿದಂತೆ ವೈದ್ಯಕೀಯ ಪ್ರವಾಸೋದ್ಯಮ , ಪರಿಸರ ವ್ಯವಸ್ಥೆಯನ್ನು ಹೆಚ್ಚಿಸಲು ಸಾರ್ವಜನಿಕ ಖಾಸಗಿ ಸಹಭಾಗಿತ್ವವನ್ನು ಬೆಳೆಸುತ್ತಿದೆ. ಭಾರತ ಸರ್ಕಾರವು ೧೭೧ ದೇಶಗಳ ಪ್ರಜೆಗಳಿಗೆ, ಇ-ವೈದ್ಯಕೀಯ ವೀಸಾ ಮತ್ತು ಇ-ವೈದ್ಯಕೀಯ ಸಹಾಯ ವೀಸಾ ಸೌಲಭ್ಯಗಳನ್ನು ವಿಸ್ತರಿಸಿದೆ.

><><><><><><><><><

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಮತದಾರರ ಪಟ್ಟಿಯಲ್ಲಿ ತಪ್ಪುಗಳನ್ನು ಉಲ್ಲೇಖಿಸಿ ಮಾಡಿದ ಆರೋಪಗಳನ್ನು ಚುನಾವಣಾ ಆಯೋಗ ತಳ್ಳಿಹಾಕಿದೆ. ಸಾಮಾಜಿಕ ಜಾಲತಾಣದ ಸತ್ಯ ಶೋಧನಾ ಸಂದೇಶದ ಮೂಲಕ ಆಯೋಗ, ಈ ಆರೋಪಗಳನ್ನು ದಿಕ್ಕು

ತಪ್ಪಿಸುವಂತಿವೆಯೆಂದು ತಿಳಿಸಿದೆ. ರಾಹುಲ್ ಗಾಂಧಿ ಅವರು ತಮ್ಮ ಹೇಳಿಕೆ ಸತ್ಯವೆಂದು ನಂಬುತ್ತಿದ್ದರೆ, ಅವರು ಚುನಾವಣಾ ನಿಯಮಗಳ ಪ್ರಕಾರ ಘೋಷಣೆಯೊಂದಕ್ಕೆ ಸಹಿ ಮಾಡಬೇಕು. ಅವರು ತಮ್ಮ ಹೇಳಿಕೆಯಲ್ಲಿ ನಂಬಿಕೆ ಇಲ್ಲದೆ ಮಾತನಾಡುತ್ತಿದ್ದರೆ, ಅಂತಹ ಆರೋಪಗಳಿಂದ ನಾಗರಿಕರ ದಿಕ್ಕು ತಪ್ಪಿಸುವುದನ್ನು ನಿಲ್ಲಿಸಬೇಕು ಎಂದು  ಆಯೋಗ ಸ್ಪಷ್ಟಪಡಿಸಿದೆ.

><><><><><><><><><

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಚುನಾವಣಾ ಆಯೋಗದ ನೈತಿಕತೆ ಕುರಿತು ಪ್ರಶ್ನೆ ಎತ್ತಿರುವುದಕ್ಕೆ ಬಿಜೆಪಿ ತೀಕ್ಷ್ಣವಾಗಿ ಪ್ರತಿಕ್ರಿಯೆ ನೀಡಿದೆ. ಮಾಧ್ಯಮಗಳೊಂದಿಗೆ ಮಾತನಾಡಿದ ಬಿಜೆಪಿ ವಕ್ತಾರ ಸಂಬಿತ್ ಪಾತ್ರ,  ರಾಹುಲ್ ಗಾಂಧಿ ಈ ಮೊದಲು ಕೂಡ ಹಲವು ಸಂವಿಧಾನಿಕ ಸಂಸ್ಥೆಗಳನ್ನು ಟೀಕಿಸಿದ್ದಾರೆ ಎಂದು ಹೇಳಿದರು.  ಕಾಂಗ್ರೆಸ್ ಆಡಳಿತವಿರುವ ರಾಜ್ಯಗಳಲ್ಲಿ ಅವರು ಆಯೋಗದ ನೈತಿಕತೆಗೆ ಪ್ರಶ್ನೆ ಎತ್ತುವುದಿಲ್ಲ ಎಂದು ಅವರು ಆರೋಪಿಸಿದರು. ೨೦೧೯ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ೯೯ ಸೀಟುಗಳನ್ನು ಗೆದ್ದಾಗ ಅದನ್ನು ವಿಜಯವಾಗಿ ಆಚರಿಸಿತು. ಆಗ ಆಯೋಗದ ವಿಶ್ವಾಸಾರ್ಹತೆಯನ್ನು ಪ್ರಶ್ನೆ ಮಾಡಲಿಲ್ಲ ಎಂದಿದ್ದಾರೆ.

><><><><><><><><><

ಬ್ಯಾಂಕಾಕ್‌ನಲ್ಲಿ ನಡೆಯುತ್ತಿರುವ ೧೯ ವರ್ಷದೊಳಗಿನವರ ಏಷಿಯನ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾರತಕ್ಕೆ ೧೨ ಪದಕಗಳು ಖಚಿತವಾಗಿವೆ.

ನಿನ್ನೆ ಐದು ಮಂದಿ ಪುರುಷ ಬಾಕ್ಸರ್‌ಗಳು ತಮ್ಮ ವಿಭಾಗಗಳಲ್ಲಿ ಉತ್ತಮ ಪ್ರದರ್ಶನ ನೀಡಿ ಸೆಮಿಫೈನಲ್ ಪ್ರವೇಶಿಸಿದ್ದು, ಈಗಾಗಲೇ ಸೆಮಿಫೈನಲ್‌ಗೆ ಪ್ರವೇಶ ಪಡೆದಿದ್ದ ಏಳು ಮಹಿಳಾ ಬಾಕ್ಸರ್‌ಗಳ ಜತೆಗೆ ಶಿವಮ್, ಮೌಸಮ್ ಸುಹಾಗ್, ರಾಹುಲ್ ಕುಂಡು, ಗೌರವ್ ಮತ್ತು ಹೇಮಂತ್ ಸಂಗ್ವಾನ್ ಉತ್ತಮ ಪ್ರದರ್ಶನ ನೀಡಿ ಅಂತಿಮ ೪ ರ ಹಂತ ತಲುಪಿದರು.

><><><><><><><><><